21 FEB 2018

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

[ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ]


ಪೋನ್ : 08232-222680/9448994839
ಇಮೇಲ್ :aee313keragodu@gmail.com

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್ (ವಿ)
ರವರಕಛೇರಿ, ಚಾವಿಸನಿನಿ,
ಕೆರಗೋಡು ಉಪ ವಿಭಾಗ ಮಂಡ್ಯ

ನಿಗಮ ಕಾರ್ಯಾಲಯ, # 29, ವಿಜಯನಗರಎರಡನೇ ಹಂತ, ಮೈಸೂರು 570017 ಫೋನ್ ನಂ. 0821 2417104/110.
ಫ್ಯಾಕ್ಸ್ ನಂ. 0821 2417107, http://www.cescmysore.org, CIN : U40109KA2004SGC035177


ಕ್ರಮಾಂಕ: ಸಕಾನಿಇಂ(ವಿ)/ಕೆ ಉ ವಿ/2017-18/ 2260-62 ದಿನಾಂಕ 19-2-18

ದಿನಾಂಕ 17.02.2018ರಂದು ಬೆಳಿಗ್ಗೆ 11-00 ಗಂಟೆಗೆ ಕೆರಗೋಡು ಉಪವಿಭಾಗದ ಕಛೇರಿಯ ಆವರಣದಲ್ಲಿ ಜನ ಸಂಪರ್ಕ ಸಭೆಯ ನಡಾವಳಿ

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು :**

1. ಶ್ರೀ ಎ.ಎನ್. ರವಿಶಂಕರ್ ಅಧೀಕ್ಷಕ ಇಂಜಿನಿಯರ್(ವಿ) ಪ್ರಭಾರ, ಕಾ ಮತ್ತು ಪಾ ವೃತ್ತ, ಮಂಡ್ಯ.
2. ಶ್ರೀ ಎ.ಎನ್. ರವಿಶಂಕರ್ ಕಾರ್ಯನಿರ್ವಾಹಕ ಇಂಜಿನಿಯರ್(ವಿ) , ಕಾ ಮತ್ತು ಪಾ ವಿಭಾಗ, ಮಂಡ್ಯ.
3. ಶ್ರೀ ಇ. ರವಿಶಂಕರ್ ಕಾರ್ಯನಿರ್ವಾಹಕ ಇಂಜಿನಿಯರ್(ಕ) ಕಾ ಮತ್ತು ಪಾ ವೃತ್ತ, ಮಂಡ್ಯ.
4. ಶ್ರೀ ಎಸ್. ಶಿವಕುಮಾರ್ ಲೆಕ್ಕಾಧಿಕಾರಿಗಳು (ವಿ) ಕಾ ಮತ್ತು ಪಾ ವಿಭಾಗಕಛೇರಿ ಮಂಡ್ಯ.
5. ಶ್ರೀ ಡಿ.ರಾಜಯ್ಯನ್ ಅಂತರಿಕ ಲೆಕ್ಕಾಧಿಕಾರಿಗಳು, ವಿಭಾಗ ಕಛೇರಿ ಮಂಡ್ಯ.
6. ಶ್ರೀ ಕೆ.ಎನ್. ಶಿವಕುಮಾರ್ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಮಂಡ್ಯ, ಉಪವಿಭಾಗ .
7. ಶ್ರೀ ಎನ್. ಸುಬ್ಬಣ್ಣ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕೆ.ಉ.ವಿ, ಮಂಡ್ಯ
8. ಶ್ರೀಮತಿ. ಸಪ್ನ.ಎಲ್ ಸಹಾಯಕ ಇಂಜಿನಿಯರ್ (ವಿ) ತಾಂತ್ರಿಕ ಶಾಖೆ, ಕೆ.ಉ.ವಿ, ಮಂಡ್ಯ
9. ಶ್ರೀ ಆದಿತ್ಯ ಕಿರಿಯ ಇಂಜಿನಿಯರ್, ಬಸರಾಳು ಶಾಖೆ ಕೆ.ಉ.ವಿ, ಮಂಡ್ಯ.
10. ಶ್ರೀ ಹೆಚ್. ಎನ್. ಮಂಜುನಾಥ್ ಕಿರಿಯ ಇಂಜಿನಿಯರ್, ಕೀಲಾರ ಶಾಖೆ ಕೆ.ಉ.ವಿ, ಮಂಡ್ಯ.
11. ಶ್ರೀ ಹೆಚ್. ಎಸ್ ಮರಿಸ್ವಾಮಿ ಕಿರಿಯ ಇಂಜಿನಿಯರ್ (ಪ್ರಭಾರ) ಕೆರಗೋಡು ಶಾಖೆ ಕೆ.ಉ.ವಿ, ಮಂಡ್ಯ
12. ಶ್ರೀ ಕಾಂತರಾಜು ಕಿರಿಯ ಇಂಜಿನಿಯರ್ (ಪ್ರಭಾರ) ಸಾತನೂರು ಶಾಖೆ ಕೆ.ಉ.ವಿ, ಮಂಡ್ಯ

ಅಧೀಕ್ಷಕ ಇಂಜಿನಿಯರ್ (ವಿ) ಕಾ ಮತ್ತು ಪಾ ವೃತ್ತ ರವರು ಸಭೆಗೆ ಬಂದ ಎಲ್ಲಾ ಸಾರ್ವಜನಿಕರು/ ಅಧಿಕಾರಿಗಳು/ ನೌಕರರನ್ನು ಸ್ವಾಗತಿಸಿದರು.

SEE (Elec) Works Circle CESC Mandya | DCA | EEE(TC) CAQC | AO Dvn | AO (I/A) | SEE (Elec)

ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬಗೆ ಹರಿಸಲುಜನ ಸಂಪರ್ಕ ಸಭೆಯನ್ನು ಉಪ ವಿಭಾಗದ ಮಟ್ಟದಲ್ಲಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ದಿನಾಂಕ 17.02.2018 ರಂದು ಬೆಳಿಗ್ಗೆ 11-00ಗಂಟೆಗೆಕೆರಗೋಡು ಉಪ ವಿಭಾಗದಕಛೇರಿಯಆವರಣದಲ್ಲಿ ಸಭೆಯನ್ನುಆಯೋಜಿಸಲಾಗಿತ್ತು.

AEE Pl file 23/2

22/2/18


ಜನ ಸಂಪರ್ಕ ಸಭೆ


ಜನ ಸಂಪರ್ಕ ಸಭೆ



| ಅರ್ಜಿಸಂ | ಅರ್ಜಿದಾರರ ಹೆಸರು ಮತ್ತು ವಿಳಾಸ | ದೂರಿನ ವಿವರ | ತೆಗೆದುಕೊಂಡಕ್ರಮ |
|---|---|---|---|
| 1 | ಶ್ರೀ.ಬಿ.ಸಿ.ನಾಗೇಂದ್ರ ಬೆಳ್ಳುಂಡಗೆರೆ 8861667011 | ಅಕ್ರಮ-ಸಕ್ರಮಯೋಜನೆಯಡಿಯಲ್ಲಿ 03 ಐಪಿ ಸ್ಥಾವರಗಳಿಗೆ ಹಣ ಪಾವತಿಸಿದ್ದು ಹೆಚ್ಚುವರಿ ಪರಿವರ್ತಕಕೋರಿರುತ್ತಾರೆ. | ಈಗಾಗಲೇ ಪ್ರೇಮ್ ಎಲೆಕ್ಟ್ರಿಕಲ್ಸ್‌ನವರಿಗೆಯುಎನ್ಐಪಿ ಯೋಜನೆಅಡಿಯಲ್ಲಿ ಪರಿವರ್ತಕ ಅಳವಡಿಸಲು ಟೆಂಡರ್ ಆಗಿರುವುದರಿಂದಆದ್ಯತೆ ಮೇರೆಗೆ ಪರಿವರ್ತಕ ಅಳವಡಿಸಿಕೊಡಲಾಗುವುದೆಂದು ತಿಳಿಸಿದರು |
| 2 | ಶ್ರೀಮತಿ.ಶೀಲಾ ಬೆಳ್ಳುಂಡಗೆರೆ | ಮನೆಯ ಮೇಲೆ ಹಾದು ಹೋಗಿರುವ ಮಾರ್ಗ ಬದಲಾಯಿಸಲುಕೋರಿ | ಸದರಿಗ್ರಾಹಕರಿಗೆ ಸ್ವಂತಕಾಮಗಾರಿಯೋಜನೆಯಲ್ಲಿ ಮಾರ್ಗ ಬದಲಾಯಿಸಿಕೊಳ್ಳಲು ತಿಳಿಸಲಾಯಿತು |
| 3 | ಶ್ರೀ.ಶಿವಲಿಂಗೇಗೌಡ ಅಂಕಣ್ಣನದೊಡ್ಡಿ | ವಿಫಲಗೊಂಡಿರುವ 25ಕೆವಿಎ ಪರಿವರ್ತಕವನ್ನು ಬದಲಾಯಿಸಿಕೊಡುವ ಬಗ್ಗೆ ಹಾಲಿ ಇರುವ ಐಪಿ ಸೆಟ್‌ಗ್ರಾಹಕರು ಹಣವನ್ನುಅಕ್ರಮ-ಸಕ್ರಮಅಡಿಯಲ್ಲಿ ಪಾವತಿಸಲಾಗಿದೆ | ಶೀಘ್ರವೇ ಪರಿವರ್ತಕವನ್ನು ಬದಲಾಯಿಸಿಕೊಡಲಾಗುವುದು ಎಂದು ತಿಳಿಸಲಾಯಿತು |
| 4 | ಶ್ರೀ.ರಮೇಶ ಮತ್ತುಇತರರು ಬೆಳ್ಳುಂಡಗೆರೆ | ಹಾಲಿ ಇರುವ 25ಕೆವಿಎ ಪರಿವರ್ತಕದ ಮೇಲೆ 6ಜನ ಐಪಿ ಗ್ರಾಹಕರಿದ್ದುಅಧಿಕ ಭಾರವಾಗಿರುವುದರಿಂದ 63 ಕೆವಿಎ ಪರಿವರ್ತಕ ಬದಲಾವಣೆ ಮಾಡಿಕೊಡಬೇಕೆಂದುಕೋರಲಾಗಿದೆ | ಅನಧಿಕೃತ ಬಳಕೆದಾರರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಶಾಖಾಧಿಕಾರಿಗಳಿಗೆ ತಿಳಿಸಿ, ಹೆಚ್ಚುವರಿ ಪರಿವರ್ತಕ ಅಳವಡಿಸಲು ಸ್ಥಳಪರಿಶೀಲನೆ ನಡೆಸಿ ವರದಿ ಸಲ್ಲಿಸಲು ತಿಳಿಸಲಾಯಿತು |
| 5 | ಶ್ರೀಮತಿ ಜಯಮ್ಮ ಕೋಂ ಶಿವಲಿಂಗಯ್ಯ ಮತ್ತುಇತರರುಆಲಕೆರೆ | ಯುಎನ್ಐಪಿ ಯೋಜನೆಅಡಿಯಲ್ಲಿ ಹಣ ಪಾವತಿಸಿದ್ದು ಇನ್ನುಲೈನ್ ಹಾಗೂಪರಿವರ್ತಕಕಾಮಗಾರಿ ಪೂರ್ಣಗೊಂಡಿರುವುದಿಲ್ಲ | ಸಂಬಂಧಪಟ್ಟ ಮೆ॥ಸ್ಕಿಲ್‌ಟೆಕ್‌ಎಲೆಕ್ಟ್ರಿಕಲ್ಸ್‌ರವರಿಗೆ ಮಾತನಾಡಿ ಕೆಲಸವನ್ನುಕೈಗೆತ್ತಿಕೊಂಡುಕಾಮಗಾರಿಯನ್ನು ಮುಂದಿನ ಶನಿವಾರದೊಳಗೆ ಪೂರ್ಣಗೊಳಿಸಲು ತಿಳಿಸಲಾಯಿತು |
| 6 | ಶ್ರೀ ಕೃಷ್ಣಶೆಟ್ಟಿ ಮತ್ತುಇತರರು | ಇವರ ಹಾಲಿ ಇರುವ ಐಪಿಸೆಟ್‌ಗೆ ವೋಲ್ಟೇಜ್‌ತೊಂದರೆಯಾಗಿರುವುದರಿಂದ ಪ್ರತ್ಯೇಕ 25ಕೆವಿಎ ಪರಿವರ್ತಕಅಳವಡಿಸಿಕೊಡಲು ಕೋರಲಾಗಿದೆ | ಹಣ ಪಾವತಿಸಿರುವ ವಿದ್ಯುತ್ ಐಪಿ ಬಳಕೆದಾರರ ರಶೀದಿ ಪಡೆದುಅಂದಾಜು ಪಟ್ಟಿತಯಾರಿ ಸಲ್ಲಿಸಲು ತಿಳಿಸಲಾಯಿತು |
| 7 | ಶ್ರೀ ಮನು ಗ್ರಾ.ಪಂ.ಸದಸ್ಯರುಕೀಲಾರ | ಶ್ರೀ ಮಂಜುನಾಥ.ಕೆ.ಇಂ(ವಿ) ರವರನ್ನು ಪೂರ್ಣಕಾಲ ಕೀಲಾರ ಶಾಖೆಗೆ ನೇಮಿಸಿಕೊಡಲು ಕೋರಲಾಗಿದೆ | ಮೇಲಾಧಿಕಾರಿಗಳ ಗಮನಕ್ಕೆ ವಿಷಯವನ್ನುತರಲಾಗಿ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಡಲಾಗುವುದೆಂದು ತಿಳಿಸಲಾಯಿತು |
| 8 | ಶ್ರೀಮತಿ ಮಂಜುಳ ಕೋಂ ಲೇ॥ಬಿ.ಪಿ.ಪುಟ್ಟಸ್ವಾಮಿ ಹಳೆಬೂದನೂರು | ಐಪಿ ಸೆಟ್ ಸಂಖ್ಯೆ ಆರ್2ಐಪಿ-2364 ಗೆ ಹಣ ಪಾವತಿಸಲಾಗಿದ್ದು ಈ ವರೆಗೂ ಲೈನ್‌ಕಾಮಗಾರಿಯನ್ನು ಕಲ್ಪಿಸಿರುವುದಿಲ್ಲವೆಂದು ತಿಳಿಸಲಾಯಿತು | ಶಾಖಾಧಿಕಾರಿಗೆಗ್ರಾಮಾಂತರ ಫೀಡರ್‌ನಿಂದ ಪರಿವರ್ತಕ ಅಳವಡಿಸಿ ವಿದ್ಯುತ್ ಸಂಪರ್ಕ ನೀಡಲುಅಂದಾಜು ಪಟ್ಟಿಸಲ್ಲಿಸಲುತಿಳಿಸಲಾಯಿತು |
| 9 | ಶ್ರೀ ಶಿವರಾಮು.ಕೆ ಮಂಡ್ಯ | ವಿದ್ಯುತ್ ಕಂಬ ಹಾಗೂ ಪರಿವರ್ತಕಗಳ ಮೇಲೆ ಬಳ್ಳಿಗಳು ಹಬ್ಬಿರುವುದುಕಂಡು ಬಂದಿದೆ ಅವುಗಳ ನಿರ್ವಹಣೆ ಮಾಡಲಾಗುತ್ತಿಲ್ಲವೆಂದು ತಿಳಿಸಿದರು | ಶಾಖಾಧಿಕಾರಿಗೆಮಾಸಿಕ ನಿರ್ವಹಣೆ ಕಾರ್ಯಗಳನ್ನು ಶೀಘ್ರವೇ ನಿರ್ವಹಿಸಲು ತಿಳಿಸಲಾಯಿತು |

| | | | |
|---|---|---|---|
| 10 | ಶ್ರೀ ಪುಟ್ಟಸ್ವಾಮಿಗೌಡಬಿನ್ ಲಿಂಗೇಗೌಡಚಂದಗಾಲು, ಬಸರಾಳುಹಾಗೂ ಹೆಚ್.ಪಾಪಣ್ಣ ಬಿನ್ ಬೋರೆಗೌಡಚಂದಗಾಲು ಬಸರಾಳು | ತಮ್ಮ ಐಪಿ ಸೆಟ್‌ಗೆ ಹಣ ಪಾವತಿಸಿದ್ದು ಹೊಸ ವಿದ್ಯುತ್ ಮಾರ್ಗ ಹಾಗೂ ಪರಿವರ್ತಕವನ್ನು ಅಳವಡಿಸಿಕೊಡಬೇಕೆಂದು ಕೋರಿ | ಶಾಖಾಧಿಕಾರಿರವರಿಗೆ ಸ್ಥಳ ಪರಿಶೀಲಿಸಿ ಆಧ್ಯತೆ ಮೇರೆಗೆಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ತಿಳಿಸಲಾಯಿತು |

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಕೆರಗೋಡು ಉಪವಿಭಾಗ, ಮಂಡ್ಯ.

ಪ್ರತಿಯನ್ನು ಕೃಪಾವಗಾಹನೆಗಾಗಿ ಸಲ್ಲಿಸಲಾಗಿದೆ:

1. ಅಧೀಕ್ಷಕ ಇಂಜಿನಿಯರ್(ವಿ).ಸೆಸ್ಕ್, ಕಾ ಮತ್ತು ಪಾ ವೃತ್ತ, ಮಂಡ್ಯ
2. ಕಾರ್ಯನಿರ್ವಾಹಕಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಮಂಡ್ಯ